ಯಾರೊಬ್ಬರಿಗೂ ಅರ್ಥವಾಗಲಿಲ್ಲ ಅಥವಾ ಯಾರೊಬ್ಬರೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಮೊದಮೊದಲು ಅವರು ಅವನತ್ತ ಅಚ್ಚರಿಯ ವೈರಭಾವ ತೋರಿದರು. ನಂತರ ಅದು ಭಯ ಮಿಶ್ರಿತ ತಾತ್ಸಾರವಾಗಿ ಮಾರ್ಪಟ್ಟಿತು. ಒಂದಿಷ್ಟು ಸಹಾನುಭೂತಿಯಾಗಲಿ ತಿಳಿವಳಿಕೆಯಾಗಲಿ ಆತನಿಗೆ ಯಾರಿಂದಲೂ ದೊರಕಲಿಲ್ಲ. ಎಲ್ಲರಿಂದ ಬಹಿಷ್ಕೃತನಾಗಿ, ಕ್ಷಣಕ್ಷಣವೂ ಕೊರೆಯುವ ಯಾತನೆಯನ್ನು ಮನದಲ್ಲಿಟ್ಟುಕೊಂಡಿದ್ದ ರಹೀಮಖಾನ, ಸಮಾಜವೇ ದಯಪಾಲಿಸಿದ, ತನ್ನ ಹೆಂಡತಿಯ ಮೇಲಿನ ಪ್ರಶ್ನಾತೀತ ಅಧಿಕಾರವನ್ನು ಚಲಾಯಿಸುತ್ತ, ಒಂದಿಷ್ಟು ಸಮಾಧಾನ ಪಟ್ಟುಕೊಳ್ಳುತ್ತಿದ್ದ.

ಮೂವತ್ತು ವರ್ಷಗಳ ಕಾಲ ಆತನ ಹೆಂಡತಿ ಆತನ ಎಲ್ಲ ಕ್ರೌರ್ಯವನ್ನು ಸಹಿಸಿಕೊಂಡಿದ್ದಳು. ಹೇಳಿದಂತೆ ಕೇಳಿ ಬಿದ್ದುಕೊಳ್ಳುವ ಗುಲಾಮಗಿರಿ ರೀತಿ ಆಕೆಯ ಕುಲದ ಕುರುಹಾಗಿ ಬಿಟ್ಟಿತ್ತು. ದೈಹಿಕ ದಂಡನೆಗೆ ಆಕೆ ಅದೆಷ್ಟು ಒಗ್ಗಿ ಹೋಗಿದ್ದಳೆಂದರೆ, ಒಂದು ವಾರವಿಡೀ ಹೊಡೆಸಿಕೊಳ್ಳದಿದ್ದರೆ ಅದು ಅವಳಿಗೆ ಅಸ್ವಾಭಾವಿಕವೆನಿಸುತ್ತಿತ್ತು. ರಹೀಮಖಾನನಿಗೆ ಹೆಂಡತಿಯನ್ನು ಹೊಡೆಯುವುದು ಆತನ ಅಸ್ತಿತ್ವದ ಒಂದು ಚಟವಾಗಿ ಬಿಟ್ಟಿತ್ತು. ನಿತ್ಯವೂ ಕ್ರೂರಕೃತ್ಯಗಳನ್ನೆಸಗುವುದು ಆತನ ಸಹಜ ಸ್ವಭಾವವಾಗಿ ಬಿಟ್ಟಿತ್ತು. ಇದಕ್ಕೆ ವ್ಯತಿರಿಕ್ತವಾಗಿ ಸನ್ನಡತೆಯಿಂದ ಬದುಕಲು ತನಗಿನ್ನು ಸಾಧ್ಯವಾದೀತೆ ಎಂಬ ಕೊನೆಯ ಕ್ಷಣದ ವಿಚಾರವೊಂದು ಆತನ ತಲೆಯಲ್ಲಿ ಸುಳಿದು ಹೋಯಿತು. ಅಷ್ಟರಲ್ಲಿ ಆತನಿಗೆ ನಿದ್ರೆ ಆವರಿಸಿಕೊಂಡಿತು. ಅಂಥ ಭಾವನೆ ಅವನಲ್ಲಿ ಮೂಡಿದ್ದು ಬಹುಶಃ ಅದೊಂದೇ ಕ್ಷಣವಾಗಿತ್ತು. ಆ ಭಾವನೆ ಹೆಂಡತಿಯ

